# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 07-09-2017

ಪ್ರಕಟಣೆಯ ಕೃಪೆಗಾಗಿ

**ಆತ್ಮವಿಶ್ವಾಸವಿಲ್ಲದಿದ್ದರೆ ಜೀವನದಲ್ಲಿನ ಉತ್ತಮ ಅವಕಾಶಗಳು ಕೈತಪ್ಪಬಹುದು – ಡಾ. ಎಂ ಪ್ರಭು**

**ಕೊಳ್ಳೇಗಾಲ 07-09-2017 :** ಅವಕಾಶಗಳು ನಮ್ಮೆಲ್ಲರ ಸುತ್ತ-ಮುತ್ತಲಿದ್ದರೂ ನಾವು ಗುರುತಿಸುವುದರಲ್ಲಿ ವಿಫಲರಾಗಿರುತ್ತೇವೆ. ನಾವಿರುವಲ್ಲಿಯೇ ಅವಕಾಶಗಳ ಅಸ್ತಿತ್ವವೂ ಇರುತ್ತದೆ. ಅವುಗಳನ್ನು ಪಡೆದುಕೊಳ್ಳುವ ದೃಷ್ಠಿ ನಮ್ಮಲ್ಲಿರಬೇಕು ಎಂದು ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ ಪ್ರಭು ತಿಳಿಸಿದರು.

ಪಟ್ಟಣದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಆಯೋಜಿಸಿದ್ದ ಪುನರ್ಮನನ ಕಾರ್ಯಕ್ರಮದಲ್ಲಿ ಹಾಜರಿದ್ದು ಮಾತನಾಡಿದರು.

ಜೀವನದ ಗುರಿಯನ್ನು ಅರ್ಥೈಸಿಕೊಂಡು ಅದಕ್ಕೆ ಸಂಬಂಧಿಸಿದ ಸಣ್ಣಪುಟ್ಟ ಅವಕಾಶಗಳನ್ನು ಕೈಚೆಲ್ಲಬಾರದು. ಸ್ಟೀವ್‌ಜಾಬ್ಸ್‌ನ ಸಣ್ಣಸಣ್ಣ ಪ್ರಯತ್ನದಿಂದಲೇ "ಆಪಲ್ ಇಂಕ್" ಎಂಬ ದೈತ್ಯ ಕಂಪನಿಯ ಸ್ಥಾಪನೆಯಾಗಿರುವುದೇ ಇದಕ್ಕೆ ಸಾಕ್ಷಿ. ಆತ್ಮವಿಶ್ವಾಸವಿದ್ದಲ್ಲಿ, ಗುರಿ ತಲುಪಬೇಕೆಂಬ ಛಲವಿದ್ದಲ್ಲಿ ಯಶಸ್ಸು ಕಾಣುವುದು ಸುಲಭ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಪ್ರೊ ಉಮೇಶ ಸವಾಲುಗಳನ್ನು ಬೆದರಿಕೆ ಎಂದು ಸ್ವೀಕರಿಸದೆ ಅವಕಾಶ ಎಂಬುದಾಗಿ ಪರಿಭಾವಿಸುವ ಜನರು ಮಾತ್ರ ಯಶಸ್ವಿಯಾಗುತ್ತಾರೆ. ಪರಿಶ್ರಮಗಳಿಗೆ ಹಾಗೂ ಪ್ರಯತ್ನಶೀಲವಂತರಿಗೆ ಕುಗ್ಗದ ಕುತೂಲಹವೇ ಆಸ್ತಿ, ಇಂತಹವರಿಗೆ ಪ್ರತಿ ಸೋಲೂ ವಿಜಯದ ಮೆಟ್ಟಲುಗಳಾಗುತ್ತವೆ. ಈ ಪ್ರಪಂಚದಾದ್ಯಂತ ಮನುಕುಲದ ಪಾಲಿಗಿರುವ ಸಂಪನ್ಮೂಲಗಳಲ್ಲಿ ಸಮೃದ್ಧ ಬುದ್ಧಿಮತ್ತೆ, ಕಲ್ಪನಾ ಶಕ್ತಿ, ಭಾವನೆ, ವಿವೇಕತೆ ವಿವೇಚನೆ, ಹೃದಯ ಸಂಪನ್ನತೆ, ಇತ್ಯಾಧಿಗಳು ಸೇರಿವೆ ಎಂಬುದನ್ನು ಮರೆಯಬಾರದು ವಿದ್ಯಾರ್ಥಿಗಳು ಪ್ರತೀ ದಿನ ಪ್ರತೀಕ್ಷಣದ ಅವಕಾಶಗಳನ್ನು ಕೌಶಲ್ಯತೆಯಿಂದ ನಿರ್ವಹಿಸಿ ಜಯ ಪಡೆದು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕೆಂದು ಕರೆ ನೀಡಿದರು.

ಗ್ರಂಥಪಾಲಕರಾದ ಶ್ರೀ ಶ್ರೀನಿವಾಸ್‌ರವರು ಗ್ರಂಥಾಲಯದಲ್ಲಿನ ಸೌಲಭ್ಯಗಳು ಗ್ರಂಥಾಲಯದ ಬಳಕೆ, ಗ್ರಂಥಾಲಯದಲ್ಲಿನ ಕ್ರಮ ಬದ್ಧತೆಗಳ ಬಗೆ ಸವಿವರವಾಗಿ ತಿಳಿಸಿಕೊಡುತ್ತಾ, ಕಾಲೇಜಿನ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಹಿರಿಯ ವಿದ್ಯಾರ್ಥಿಗಳೂ ಕೂಡ ಗ್ರಂಥಾಲಯವನ್ನು ಬಳಸಬಹುದಾಗಿದ್ದು ಬಹಳಷ್ಟು ಹಿರಿಯ ವಿದ್ಯಾರ್ಥಿನಿಯರು ಈಗಾಗಲೇ ಬಳಸುತ್ತಿರುವುದರ ಬಗೆಗೆ ತಿಳಿಸಿದರು

ಶ್ರೀ ಶಿವು ಬಿ ಸ್ವಾಗತಿಸಿದರು, ಶ್ರೀ ಶ್ರೀನಿವಾಸ್ ವಂದಿಸಿದರು.

ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ವತಿಯಿಂದ ಆಯೋಜಿಸಿದ್ದ ಪುನರ್ಮನನ ಕಾರ್ಯಕ್ರಮದಲ್ಲಿ ಡಾ. ಎಂ ಪ್ರಭುರವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀ ಶ್ರೀನಿವಾಸ್, ಪ್ರಾಚಾರ್ಯ ಪ್ರೊ. ಉಮೇಶರವರನ್ನು ಕಾಣಬಹುದು




ಶ್ರೀ ಶ್ರೀನಿವಾಸ್ ರವರು ಗ್ರಂಥಾಲಯದಲ್ಲಿನ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಿರುವುದು. ಚಿತ್ರದಲ್ಲಿ ವಿದ್ಯಾರ್ಥಿಗಳು ಶ್ರೀ ಶಿವು ಬಿ., ಹಾಗೂ ಶ್ರೀ ಪ್ರಭುಸ್ವಾಮಿರವರನ್ನು ಕಾಣಬಹುದು.

